ಮುಂಜಾವು

ವಾರಪತ್ರಿಕೆ.

ಸಂಪಾದಕ: ಸಿರಿಮನೆ ನಾಗರಾಜ್

ರಿಜಿಸ್ಟರ್ಡ್ ನಂ. ಕೆಆರ್‌ಎನ್‌ಎಸ್ -19

5ನೇವರ್ಷ 20ನೇ ಸಂಚಿಕೆ ಕೊಪ್ಪ 1-2-1987 ಭಾನುವಾರ ಬೆಲೆ 50 ಪೈಸೆ

ದುಡಿವ ವರ್ಗದವರ ಓಟುಗಳ ನಿರ್ಣಾಯಕ ಪಾತ್ರ

ಕಳೆದೆರಡು ವರ್ಷಗಳಿಂಥ ರಾಜ್ಯದ ರಾಜಕೀಯದಲ್ಲಿ ಭಾರೀ ಪ್ರಚಾರದ ಧೂಳೆಬ್ಬಿಸಿದ್ದ ಜಿಲ್ಲಾ ಪರಿಷತ್ ಮತ್ತು ಮಂಡಲ ಪಂಚಾಯತ್ ಚುನಾವಣೆಗಳ ಗಲಾಟೆ ಮುಗಿದಿದೆ. ಒಟ್ಟು ಸುಮಾರು 56 ಸಾವಿರ ಮಂದಿ ಪ್ರತಿನಿಧಿಗಳು ಆಯ್ಕೆಯಾಗಿದ್ದಾರೆ. ಇನ್ನೊಂದು ತಿಂಗಳೊಳಗೆ ಈ ಸಂಸ್ಥೆಗಳ ರಚನೆಯ ಪ್ರಾಥಮಿಕ ಕೆಲಸಗಳೆಲ್ಲ ಮುಗಿದು ಅವು ಕಾರ್ಯಾರಂಭ ಮಾಡುತ್ತವೆಂದು ಮಂತ್ರಿ ನಜೀರ್ ಸಾಬ್ ಹೇಳಿದ್ದಾರೆ.

ಆಶಾವಾದ

ಈ ಎರಡು ಸಂಸ್ಥೆಗಳೂ ರಾಜ್ಯ ಸರ್ಕಾರದಲ್ಲಿ ಅಡಕವಾಗಿರುವ ಅಧಿಕಾರವನ್ನು ಮತ್ತು ಸಂಪನ್ಮೂಲಗಳನ್ನು ವಿಕೇಂದ್ರೀಕರಣಗೊಳಿಸಿ, ಇಡೀ ಜಿಲ್ಲೆಯ ಹಾಗೂ ಬಿಡಿ ಬಿಡಿಯಾಗಿ ಗ್ರಾಮಗಳ ಸಮಗ್ರ ಅಭಿವೃದ್ಧಿಗೆ ಸಂಪನ್ಮೂಲ ಸಹಿತವಾಗಿ ನೇರವಾಗಿ (ಅಂದರೆ ಸರ್ಕಾರದ ಕಡೆ ಕೈಯೊಡ್ಡುವ ಅಗತ್ಯವಿಲ್ಲದೆ) ಕೆಲಸ ಮಾಡುತ್ತವೆ ಎಂಬುದು ಇವುಗಳ ಬಗೆಗಿರುವ ಆಶಾವಾದ. (ಹಾಗೆಂದು ಪ್ರಚಾರವಿದೆ.)

ಈವರೆಗೆ ಗ್ರಾಮ ಪಂಚಾಯಿತಿಯೆಂಬುದೊಂದು ನಿಃಸತ್ವವಾದ ನಾಮಕಾವಾಸ್ತೆ ಸಂಸ್ಥೆಯಾಗಿತ್ತು. ಗ್ರಾಮಾಭಿವೃದ್ಧಿಯ ಯಾವ ವಿಚಾರದಲ್ಲೂ ಅದು ಹೇಳಿಕೊಳ್ಳುವಂಥದೇನನ್ನೂ ಮಾಡುವುದು ಸಾಧ್ಯವಿರಲಿಲ್ಲ. ಗ್ರಾಮದಲ್ಲಿ ಸರ್ಕಾರದ ವತಿಯಿಂದ ಏನೇನು ನಡೆಯುತ್ತಿದೆಯೆಂಬುದೇ ಅದಕ್ಕೆ ಗೊತ್ತಿರಲಿಲ್ಲ! ಇನ್ನು ಜಿಲ್ಲಾ ಮಟ್ಟದಲ್ಲಂತೂ ಒಂದು ಸಮರ್ಪಕವಾದ ಆಡಳಿತಾಂಗವೇ ಇರಲಿಲ್ಲ. 'ಜಿಲ್ಲಾ ಗ್ರಾಮೀಣ ಅಭಿವೃದ್ಧಿ ಸಂಸ್ಥೆ'ಯೆಂಬುದೊಂದು ಈಚಿನ ವರ್ಷಗಳಲ್ಲಿ ಚಾಲ್ತಿಯಲ್ಲಿದ್ದರೂ ಅದೂ ಕೂಡ ಹೆಚ್ಚು ಕಮ್ಮಿ ನಾಮಕಾವಸ್ತೆಯೇ ಆಗಿತ್ತು.

ಈ ದೃಷ್ಟಿಯಿಂದ ಈ ಮೇಲಿನ ಆಶಾವಾದ ನಮಗೆ ಬಹಳ ಆಪ್ಯಾಯಮಾನವಾಗುತ್ತದೆಯಾದರೂ, ಈಗಿನ ಚುನಾವಣೆಗಳು ನಡೆದ ರೀತಿ, ಅದರಲ್ಲಿ ಉಕ್ಕೆದ್ದು ಹರಿದ ಭ್ರಷ್ಟತೆಯ (ಹೆಂಡ-ಹಣ-ಪಕ್ಷಪಾತಯುತವಾದ ಭರವಸೆಗಳು) ಹೊಳೆ, ಅಲ್ಲಿ ನಡೆದ ಕತ್ತಿ ಮಸೆತ, ವಿವಿಧ ಅಭ್ಯರ್ಥಿಗಳು – ಪಕ್ಷಗಳು ಮತದಾರ ಮನುಷ್ಯರನ್ನು ಕೇವಲ ಓಟುಗಳನ್ನಾಗಿ ಎಣಿಸಿದ್ದು, ಆಮಿಷಗಳಿಗೆ ಬಗ್ಗದ ಬಡ ಜನರ ಮೇಲೆ ನಡೆದ ದಬ್ಬಾಳಿಕೆ–ಬೆದರಿಕೆ–ಸೇಡಿನ ಮಾತುಗಳು– ಮುಂತಾದುವನ್ನು ಗಮನಿಸಿದರೆ ಎಂಥ ಆಶಾವಾದಿಯೂ ಸಿನಿಕನಾಗುವಂತಾಗುತ್ತದೆ.

ನಮ್ಮ ಕ್ಷೇತ್ರದಲ್ಲಿ

ಶೃಂಗೇರಿ ವಿಧಾನ ಸಭಾ ಕ್ಷೇತ್ರ ಕೂಡ ಈ ಮಾತಿಗೆ ಹೊರತಾಗಿ ಉಳಿಯಲಿಲ್ಲ. ಚುನಾವಣೆಯಲ್ಲಿ ಹೆಂಡ-ಹಣ ಹಂಚುವುದರಲ್ಲಿ ಕೆಲವು ಕಡೆಗಳಲ್ಲಿ ಜನತಾ ಪಕ್ಷದವರು ಕಾಂಗ್ರೆಸ್ಸನ್ನೂ ಮೀರಿಸಿದರು! (ಹಾಗೇ ಕೆಲವು ಕಡೆ ತಾವೂ ಹಂಚದೆ, ಬೇರೆಯವರಿಗೂ ಹಂಚಲು ಬಿಡದೆ ಕಾವಲು ನಡೆಸಿದ್ದೂ ಇದೆ.) ಕ್ಷೇತ್ರ ಜನತಾ ಪಕ್ಷದ ಅಧ್ಯರೂ, ಭಾರೀ ಯೋಗ್ಯರೆಂದು ಪ್ರಚಾರದಲ್ಲಿದ್ದವರೂ ಆದ ಮೀಗಾ ಚಂದ್ರಶೇಖರ್‌ರವರ ಕ್ಷೇತ್ರದಲ್ಲೇ ಹರಿದ ಹೆಂಡದ ಹೊಳೆ ಜನತಾ ಪಕ್ಷದ ಬಗ್ಗೆ ಅಷ್ಟೋ ಇಷ್ಟೋ ಆಸೆ ಉಳಿಸಿಕೊಂಡಿದ್ದವರಿಗಂತೂ ದಿಗ್ಭ್ರಮೆಹಿಡಿಸಿತು ಇದು ಮೀಗಾ ಅವರಿಗೆ ಗೊತ್ತಿತ್ತೋ ಇಲ್ಲವೊ ಎಂಬುದು ಬೇರೆ ಪ್ರಶ್ನೆ. ಆದರೆ ನಡೆದಿರುವುದಂತೂ ಸತ್ಯ.

ದುಡಿವ ಜನರ ಒಲವು

ಚುನಾವಣೆಯಲ್ಲಿ ಪ್ರತಿಯೊಬ್ಬ ಅಭ್ಯರ್ಥಿಯೂ ತನಗೆ ಬರಬಹುದಾದ ಓಟುಗಳ ಲೆಕ್ಕ ಹಾಕುವಾಗ ಆ ಜಾತಿ ಓಟು ಇಷ್ಟು, ಈ ಜಾತಿ ಓಟು ಇಷ್ಟು ಎಂದು ಲೆಕ್ಕ ಹಾಕುತ್ತಾನೆ. ಯಾರದೋ ಗೆಲುವಿಗೆ ಅಥವಾ ಸೋಲಿಗೆ ಆ ಜಾತಿಯವರ ಓಟು ಕಾರಣವಾಯಿತು, ಈ ಕೋಮಿನವರ ಓಟು ಕಾರಣವಾಯಿತು ಎಂದೆಲ್ಲಾ ವಿಶ್ಲೇಷಿಸುತ್ತಾರೆ. ಆದರೆ ನಿಜವಾಗಿ ನೋಡಿದರೆ, "ಹಿಂದುಳಿದ ವರ್ಗಗಳು", "ದುರ್ಬಲ ವರ್ಗಗಳು" ಎಂದು ಕರೆಯಲ್ಪಡುವ ಒಟ್ಟಾರೆ ದುಡಿವ ವರ್ಗಗಳವರ ಓಟುಗಳೇ ಯಾವಾಗಲೂ ನಿರ್ಣಾಯಕವಾಗುವುದು. ಅವರ ಒಲವನ್ನು ಗಳಿಸಿದವರು, ದೇವರಾಜ ಅರಸರಂತೆ ಪ್ರಾಮಾಣಿಕವಾಗಿಯೂ ಕಳಕಳಿ ಉಳ್ಳವರಾಗಿದ್ದರೆ, ಬೇರೆ ವರ್ಗದವರನ್ನು ಸಹ ತಿದ್ದಿ ಹದ್ದುಬಸ್ತಿನಲ್ಲಿಡಬಲ್ಲರು, ಹಾಗೆ ಮಾಡಿಯೂ ಗೆಲ್ಲಬಲ್ಲರು. ದುಡಿವವರ್ಗದವರ ಒಲವು ಗಳಿಸಲಾರದವರು ಮಾತ್ರ ಹೀಗೆ ಆ–ಈ ಜಾತಿಗಳಿಗೆ ಜೋತು ಬೀಳಬೇಕಾಗುತ್ತದೆ, ಅವರ ಅಡಿಯಾಳಾಗಬೇಕಾಗುತ್ತದೆ.

ಅದಕ್ಕೇ ಆರಂಭದಿಂದಲೂ ಸಕಾರಣವಾಗಿಯೋ ಭ್ರಮೆಯ ಕಾರಣವಾಗಿಯೋ ಈ ದುಡಿವ ವರ್ಗದ ಓಟನ್ನು ಸಾರಾ ಸಗಟಾಗಿ ತನ್ನದಾಗಿಸಿಕೊಂಡಿರುವುದರಿಂದಲೇ ಕಾಂಗ್ರೆಸ್ ಎಷ್ಟೇ ದುಷ್ಟ-ಭ್ರಷ್ಟವಾದಾಗಲೂ ಅದನ್ನು ಸೋಲಿಸಲು ಬೇರೆಲ್ಲರಿಗೂ ಹೆಚ್ಚು-ಕಮ್ಮಿ ಅಸಾಧ್ಯವೇ ಎಂಬಷ್ಟಾಗಿರುವುದು.

ಪುಡಾರಿತನ, ನಿಷ್ಕಾಳಜಿ

ಈ ದೃಷ್ಟಿಯಿಂದ ವಸ್ತುನಿಷ್ಠವಾಗಿ ವಿಶ್ಲೇಷಿಸಿದರೆ, ಜನತಾಪಕ್ಷ ಈ ಬಾರಿ ದುಡಿವ ವರ್ಗದ ಮತದಾರರ ಒಲವನ್ನು ಅಷ್ಟಾಗಿ ಗಳಿಸಿರಲಿಲ್ಲವೆಂಬ ಅಂಶ ಎದ್ದುಕಾಣುತ್ತದೆ. ಇದರ ಜೊತೆಗೆ ಶಾಸಕ ಗೋವಿಂದ ಗೌಡರ ಕೊನೆಯಿಲ್ಲದ ರಾಜಕೀಯ ದೌರ್ಬಲ್ಯಗಳು ಅವರ ಕೆಲ ಹಿಂಬಾಲಕರ ಪುಡಾರಿಗಿರಿ ಮತ್ತು ನಿಷ್ಕಾಳಜಿ ಮುಂತಾದವುಗಳೂ ಸೇರಿಕೊಂಡು ಈ ಕ್ಷೇತ್ರದಲ್ಲಿ ಜನತಾ ಪಕ್ಷ ಜಿಲ್ಲಾ ಪರಿಷತ್ತಿನಲ್ಲಿ ಹೀನಾಯವಾಗಿ ನೆಲ ಕಚ್ಚಿದರೆ, ಮಂಡಲ ಪಂಚಾಯ್ತಿನಲ್ಲೂ ಅದರ ಸಾಧನೆ ಅಷ್ಟಕ್ಕಷ್ಟೇ ಆಯಿತು.

ದುಡಿವ ವರ್ಗದವರ ಒಲವು, ಬೆಂಬಲ ಸಾಕಷ್ಟು ಇದ್ದಿದ್ದರೆ, ಶೃಂಗೇರಿಯಲ್ಲಿ ಬ್ರಾಹ್ಮಣರು ಮತ್ತು ಮುಸ್ಲಿಮರ ಓಟುಗಳಾಗಲಿ, ಹರಿಹರಪುರದಲ್ಲಿ ವೈಯಕ್ತಿಕ ಚಾರಿತ್ರ್ಯವಧೆಯ ಪ್ರಚಾರವಾಗಲೀ ನಿರ್ಣಾಯಕವಾಗುತ್ತಿರಲಿಲ್ಲ; ಕಚ್ಚೋಡಿ ಶ್ರೀನಿವಾಸ್, ಜಯಲಕ್ಷ್ಮಿಯವರಂಥ ಸಮರ್ಥ, ಉತ್ತಮ ಅಭ್ಯರ್ಥಿಗಳು ಸೋಲುತ್ತಿರಲಿಲ್ಲ. ಪಕ್ಷಾಂತರದಂಥ ವಿಚಾರಗಳಿಗೆ ಅಷ್ಟಾಗಿ ಬೆಲೆ ಕೊಡಲು ಅರಿಯದ ಈ ವರ್ಗದವರು, ಕೊಪ್ಪದಲ್ಲಿ ಕಾಡಪ್ಪ ಗೌಡರನ್ನು ಸಹ ಗೆಲ್ಲಿಸುವ ಸಾಧ್ಯತೆಯಿತ್ತೋ ಏನೋ!

ಮರ್ಮ ಅರಿಯದೇ....

ದುಡಿವ ವರ್ಗಗಳ ಈ ಒಲವಿನ ಮರ್ಮವನ್ನು ಜನತಾ – ಕಾಂಗ್ರೆಗಳಿಬ್ಬರೂ ಅರಿತದ್ದು ಕಾಣುವುದಿಲ್ಲ. ಕಾಂಗ್ರೆಸಿಗರು ತಮ್ಮ ಗೆಲುವಿಗೆ, 1) ವಿಜಯ ಅಜಿಲರ ಅಪಾರ ಜನಪ್ರಿಯತೆ ಹಾಗೂ ಮಾಂತ್ರಿಕ ಸಂಘಟನಾ ಚಾತುರ್ಯ ಕಾರಣವೆಂದು ಕೆಲವರೂ, 2) ಕಳೆದ ಒಂದೂವರೆ ವರ್ಷದಿಂದ ಕೊಪ್ಪದಲ್ಲಿ ಘಾಂಧಲೆ ಎಬ್ಬಿಸಿ ನಿತ್ಯ ಅಶಾಂತಿಗೆ ಮೂಲ ಕಾರಣರಾಗುವ ಮೂಲಕ ಗೋವಿಂದ ಗೌಡರಿಗೂ ಜನತಾದವರಿಗೂ ಚಳ್ಳೆ ಹಣ್ಣು ತಿನ್ನಿಸಿದ (!) ಕೆಲವರನ್ನು ಕಾಂಗ್ರೆ ಪಕ್ಷಕ್ಕೆ ಸೇರಿಸಿಕೊಂಡಿದ್ದರಿಂದ ಆವರ ಜನಪ್ರಿಯತೆಯಿಂದಾಗಿ ಪಕ್ಷದ ಪ್ರತಿಷ್ಠೆ ಹೆಚ್ಚಿ ಗೆಲುವು ಸಾಧ್ಯವಾಯಿತೆಂದು ಕೆಲವರೂ ತಿಳಿದುಕೊಂಡಿರುವಂತೆ ಕಾಣುತ್ತದೆ. (ಹಾಗೆಂತ, ವಿಜಯ ಅಜಿಲರ ಜನಪ್ರಿಯತೆ ಮತ್ತು ಸಂಘಟನಾ ಸಾಮರ್ಥ್ಯಗಳು ಕಮ್ಮಿಯೇನಲ್ಲ ಎಂಬುದೂ ನೆನಪಿಡಬೇಕಾದ್ದೇ.)

ದೌರ್ಜನ್ಯದ ವರ್ತನೆ

ಇತ್ತ ಜನತಾದವರಲ್ಲಂತೂ ಈ ಮರ್ಮದ ಬಗೆಗಾಗಲಿ, ತಮ್ಮ ವೈಫಲ್ಯ, ದೋಷ, ದುಷ್ಟತನಗಳ ಬಗೆಗಾಗಲೀ ಆತ್ಮ ವಿಮರ್ಶೆ ಮಾಡಿಕೊಳ್ಳುವಷ್ಟು ತಾಳ್ಮೆ, ಮುತ್ಸದ್ದಿತನ ಕಾಣುತ್ತಿಲ್ಲ. ಅದರ ಬದಲು "ಈ... ಮಕ್ಕಳು ನಮ್ಮ ಹಸಿರು ಕಾರ್ಡಿನ ಅಕ್ಕಿ ತಿಂದು ತಿಂದು ಕೊಬ್ಬಿದ್ದಾರೆ, ಇವರಿಗೆ ಹೇಗೆ ಬುದ್ಧಿ ಕಲಿಸಬೇಕೆಂದು ನಮಗೆ ಗೊತ್ತು!" ಎಂಬಂಥ ಮಾತುಗಳೂ ವರ್ತನೆಗಳೂ ಅಲ್ಲಲ್ಲಿ ಕಂಡು ಬಂದಿವೆ.

ಉದಾಹರಣೆಗೆ, ಮಂಡಲ ಪಂಚಾಯಿ[illegible] ಫಲಿತಾಂಶ ಘೋಷಣೆಯ ನಂತರ ಹೊ[illegible] ಕೊಪ್ಪದಲ್ಲಿ ಜನತಾ–ಕಾಂಗ್ರೆಗಳಿಬ್ಬರ ವಿ[illegible] ಯೋತ್ಸವ ಮೆರವಣಿಗೆಗಳು ಎದುರು ಬ[illegible] [illegible]ಗ ಅಸಗೋಡು ಜೀವನ್ನವರ ಶ್ರೀ[illegible]ರ್ ಕಜ್ಜಗಿಯ್ಯ ಎಂಬ ದಲಿತ ವೃದ್ಧ[illegible] ಕಾಲ ಮೇಲೆ ಹತ್ತಿ ಹೋಯಿತು. ಇನ್ನೊ[illegible] ದಲಿತ ಯುವಕ ಶಂಭುವಿನ ಕಣ್ಣಿನ ಬ[illegible]ಕ್ಕೆ ಬಾವುಟದ ಕೋಲಿನ ಹಿಂಭಾಗದ[illegible] ಕ್ರೂರವಾದ ಪೆಟ್ಟು ಬಿತ್ತು. ಕಜ್ಜಗ[illegible] ಕುಡಿದು ತೂರಾಡುತ್ತಾ ಬಂದು [illegible] ಡಿಕ್ಕಿ ಹೊಡೆದರೆಂತಲೂ, ಕುಡಿದ ನಶೆ[illegible]

(ಕೊನೇ ಪುಟ[illegible])

ರಾ|| ಕಿರಿಯರ 1500 ಮೀ. ಓಟದಲ್ಲಿ ಗೀತಾ ತೃತೀಯ

ಕೊಪ್ಪ: ಮಂಡ್ಯದಲ್ಲಿ ಜನವರಿ ಮೊದಲ ವಾರ ನಡೆದ ರಾಜ್ಯ ಮಟ್ಟದ ಕಿರಿಯರ ಕ್ರೀಡಾ ಕೂಟದಲ್ಲಿ 3000 ಮೀ., 5000 ಮೀ. ಓಟಗಳಲ್ಲಿ ಪ್ರಥಮ, 1500 ಮೀ. ಓಟದಲ್ಲಿ ದ್ವಿತೀಯ ಸ್ಥಾನ ಗಳಿಸಿದ್ದ ಇಲ್ಲಿನ ಉದಯೋನ್ಮುಖ ಓಟಗಾರ್ತಿ ಜೆ. ಎಸ್. ಗೀತಾ ಜನವರಿ ಕೊನೇವಾರ ಬೆಂಗಳೂರಲ್ಲಿ ನಡೆದ ರಾಷ್ಟ್ರೀಯ ಸ್ಪರ್ಧೆಗಳಲ್ಲಿ 1500 ಮೀ ಓಟದಲ್ಲಿ ತೃತೀಯ ಸ್ಥಾನ ಪಡೆದಿದ್ದಾಳೆ.

ಮಾಮ್‌ಕೋಸ್ ಏಲಕ್ಕಿ ವ್ಯಾಪಾರ - ಧಾರಣೆ

ಶಿವಮೊಗ್ಗ : ಇಲ್ಲಿನ ಮಾಮ್‌ಕೋಸ್‌ನಲ್ಲಿ ಜ. 24ರಂದು ನಡೆದ ಏಲಕ್ಕಿ ವ್ಯಾಪಾರದಲ್ಲಿ ಬಂದ ಧಾರಣೆಗಳ ವಿವರ:

ಅತೀ ಉತ್ತಮ ರಾಶಿ ಕಾಯಿ – ರೂ. 171

ರಾಶಿ ಕಾಯಿ – ರೂ. 140–150

ಮಧ್ಯಮ ರಾಶಿ ಕಾಯಿ–ರೂ. 115–130

ಕೊಳೆ ರಾಶಿ ಕಾಯಿ – ರೂ. 100–110

ಹಸಿರು ರಾಶಿ ಕಾಯಿ–ರೂ. 100–130

ಸಾಧಾರಣ ಕಾಯಿಗೆ ಬೇಡಿಕೆ ಇರುವುದಾಗಿಯೂ ಸಂಘದ ಪ್ರಕಟಣೆ ತಿಳಿಸಿದೆ.

ಬಸರಿಕಟ್ಟೆ ರಥೋತ್ಸವ

ಬಸರಿಕಟ್ಟೆ: ಇಲ್ಲಿನ ಜನಾರ್ದನ ಸ್ವಾಮಿ ದೇವಸ್ಥಾನದ ಮಹಾರಥೋತ್ಸವ ಫೆ. 18 ರಂದು ನಡೆಯುವುದು. ಫೆ. 17ರಿಂದ 20 ರವರೆಗೆ ವಿವಿಧ ಉತ್ಸವಗಳು ನಡೆಯುವುವು.

ಇದೊಂದು ಸಹಕಾರ ಸಂಘ — ಹೀಗೊಬ್ಬ ಕಾರ್ಯದರ್ಶಿ !

ಕೊಪ್ಪ ತಾಲ್ಲೂಕಿನ ಹಿರೇಕೊಡಿಗೆಯಲ್ಲಿ ಕಳೆದ ವರ್ಷ ಕೊಪ್ಪದ "ಗಿರಿಜನ ದೊಡ್ಡ ಪ್ರಮಾಣದ ಸಹಕಾರ ಸಂಘ"ದ ಶಾಖೆಯೊಂದು ಆಗಿನ ಉತ್ಸಾಹಿ ಕಾರ್ಯದರ್ಶಿ ಶ್ರೀ ರಾಮಭಟ್ಟರ ಪ್ರಯತ್ನದಿಂದ ಪ್ರಾರಂಭವಾಯಿತು. ಸುಮಾರು 4-5 ವರ್ಷಗಳಿಂದ ಅಕ್ಕಿ-ಸಕ್ಕರೆ-ಸೀಮೆಎಣ್ಣೆ ಮತ್ತಿತರ ರೇಶನ್ ಪದಾರ್ಥಗಳಿಗೆ ಪರದಾಡುತ್ತಿದ್ದ ಹಿರೇಕೊಡಿಗೆ ಗ್ರಾಮಸ್ಥರಿಗೆ ಅನುಕೂಲಕರ ವ್ಯವಸ್ಥೆಯಾಗಿ ಬಂದ ಈ ಸಹಕಾರ ಸಂಘ ಉಪಕಾರಿಯಾಗಿ 8-10 ತಿಂಗಳು ಚೆನ್ನಾಗಿ ನಡೆಯಿತು. ಇಲ್ಲಿ ದಿನ ಬಳಕೆಯ ಎಲ್ಲಾ ವಸ್ತುಗಳು ಸುಲಭ ಬೆಲೆಯಲ್ಲಿ ಗ್ರಾಹಕರಿಗೆ ಲಭ್ಯವಾಗುತ್ತಿದ್ದವು ಅದರಲ್ಲೂ ಬಡವರಿಗೆ ಈ ಸೊಸೈಟಿ ಅತಿ ಉಪಯುಕ್ತವಾಗಿತ್ತು.

ಆದರೆ ಈಗ 2-3 ತಿಂಗಳಿಂದ ಈ ಸಹಕಾರ ಸಂಘದ ಸ್ಥಿತಿ ಅತೀ ಬೇಸರ ತರುವಂತಾಗಿದೆ. 5.1.87ರಲ್ಲಿ ಇಲ್ಲಿಗೆ ಹಸಿರು ಕಾರ್ಡಿನ ಅಕ್ಕಿ ಬಂದಿರಲಿಲ್ಲವೆಂದು ತಿಳಿದು ಹಾಲಿ ಕಾರ್ಯದರ್ಶಿ ಮುರಗೋಡ್‌ರನ್ನು ಭೇಟಿಯಾದಾಗ "ಅಕ್ಕಿ ಬಂದಿಲ್ಲ"ವೆಂದು ತಿಳಿಸಿದರು. ಆದರೆ ಕೊಪ್ಪ ತಾ.ವ್ಯ.ಮಾ.ಸ.ನಿ. ಯಲ್ಲಿವಿಚಾರಿಸಿದಾಗ ಸಹಕಾರ ಸಂಘದವರು ಕೊಂಡು ಹೋಗಿಲ್ಲನೆಂದು ತಿಳಿಸಿದರು!

2 ತಿಂಗಳಿಂದ ಸೀಮೆಎಣ್ಣೆ ಬಂದಿಲ್ಲ. ಕೊಪ್ಪದಲ್ಲಿ ಸೀಮೆಎಣ್ಣೆ ಲಾರಿಯವರು ಬಂದಾಗ ನಾವು ವಿಚಾರಿಸಿದರೆ "ನಿಮ್ಮ ಸೊಸೈಟಿಯಲ್ಲಿ ಹಣವಿಲ್ಲಂತೆ?" ಎಂದು ಉತ್ತರ ಬಂದಿದೆ. ಕೊಪ್ಪಕ್ಕೆ 2-3 ಬಾರಿ ಸೀಮೆಣ್ಣೆ ಸರಬರಾಜು ಆಗಿದೆ. ಅಂದರೆ ಕಾರ್ಯದರ್ಶಿ ಮುರಗೋಡ್‌ರವರಿಗೆ ಈ ಸಹಕಾರ ಸಂಘಗಳ ಬಗ್ಗೆ ಅಸಡ್ಡೆ ಇರುವಂತಿದೆ. ಕಾರ್ಯದರ್ಶಿಗಳನ್ನು ಭೇಟಿಯಾಗುವುದೇ ಕಷ್ಟವಾಗಿದೆ. (ನಾಲ್ಕನೇ ಪುಟಕ್ಕೆ)

ಚಂದಾದಾರರು ಗಮನಿಸಿ

ಪ್ರಿಯ ಓದುಗರಲ್ಲಿ,

ನಾವು ಪತ್ರಿಕೆ ಪ್ರಾರಂಭಿಸಿ ಐದು ವರ್ಷಗಳೇ ಕಳೆದು ಈಗ ಮತ್ತೊಮ್ಮೆ ಜನವರಿ ಬಂದಿದೆ. ಪತ್ರಿಕೆಯ ಚಂದಾದಾರರು ಸಾಧ್ಯವಾದಷ್ಟು ತಾವಾಗಿಯೇ ಚಂದಾ ಕಳಿಸುವ ಮನಸ್ಸು ಮಾಡಬೇಕು. ನಾವು ಸಂಗ್ರಹಣೆಗೆ ಹೋದಾಗ ಕೆಲವರು ಸಿಗದಿರಬಹುದು, ಅಥವಾ ಕೆಲವು ಪ್ರದೇಶಗಳಿಗೆ ಹೋಗಲು ನಮಗೆ ಸಾಧ್ಯವಾಗದೆಯೂ ಇರಬಹುದು. ಇದೇ ಕಾರಣಕ್ಕೆ ಈಗಾಗಲೇ ಕೆಲವರದು ಮೂರು ವರ್ಷ, ನಾಲ್ಕು ವರ್ಷದ ಚಂದಾ ಕೂಡ ಬಾಕಿಯಾದುದಿದೆ. **ನಮ್ಮ ಪತ್ರಿಕೆಗೆ ಓದುಗರ ಚಂದಾ ಹಣವೇ ಆಹಾರ, ಅದೇ ಪುಷ್ಟಿ. ಬೇರಾವುದೇ ಕಳ್ಳ ಮಾರ್ಗದ ಸಂಪಾದನೆ ಇಲ್ಲ** — ಎಂಬುದನ್ನು ಓದುಗರು ಜ್ಞಾಪಕವಿಡಬೇಕಾಗಿ ಕೋರಿಕೆ.

ಎರಡನೆಯದಾಗಿ, ನಮ್ಮ ಕೇಂದ್ರ ಸರ್ಕಾರದ ತಲೆಕಟ್ಟಿ ಅಂಚೆ ದರ ಏರಿಕೆಯಿಂದಾಗಿ ಸಣ್ಣ ಪತ್ರಿಕೆಗಳ ಉಸಿರು ಕಟ್ಟುವಷ್ಟಾಗಿದೆ. ಮೊದಲೇ ಮುದ್ರಣ ಕಾಗದ ಮತ್ತಿತರ ವೆಚ್ಚಗಳ ತೀವ್ರ ಹೆಚ್ಚಳದಿಂದ ಸಮಸ್ಯೆಗೆ ಸಿಕ್ಕಿದ್ದ ಈ ಪತ್ರಿಕೆಗಳು ಈಗಂತೂ ಕೇವಲ ಅಂಚೆ ದರ ಭರ್ತಿಗಾಗಿಯಾದರೂ ಚಂದಾ ಹಣ ಹೆಚ್ಚಿಸಲೇಬೇಕಾಗಿದೆ. ನಾವೂ ಕೂಡ, ಪತ್ರಿಕೆ ಆರಂಭಿಸಿ ಐದು ವರ್ಷದ ನಂತರ ಇದೀಗ ವಾರ್ಷಿಕ ಚಂದಾವನ್ನು 20ರಿಂದ 25 ರೂಪಾಯಿಗೆ ಏರಿಸಿದ್ದೇವೆ. ನೀವು ಕೊಡುವ ಈ ಹೆಚ್ಚುವರಿ ಹಣದ ಒಂದು ಪೈಸೆ ಕೂಡ ನಮಗಲ್ಲ ಎಂಬುದನ್ನು ಗುರುತಿಸಿ.

ಹೀಗೆ ಹೆಚ್ಚಿದ ಅಂಚೆ ದರದಿಂದಾಗಿ ಇನ್ನು ಮುಂದೆ ಚಂದಾ ನವೀಕರಿಸದವರಿಗೆ ಪತ್ರಿಕೆ ಕಳಿಸುವುದು ಅಸಾಧ್ಯವಾಗುತ್ತದೆ. ಆದ್ದರಿಂದ ಎಲ್ಲಾ ಚಂದಾದಾರರೂ ಕೂಡಲೇ ಚಂದಾ ಹಣ ಕಳಿಸಲು ಕೋರಿಕೆ. ಈಗಾಗಲೇ 2-3 ವರ್ಷದ ಚಂದಾ ಬಾಕಿಯಾಗಿದ್ದ ಕೆಲವರಿಗೆ ಅನಿವಾರ್ಯವಾಗಿ ಪತ್ರಿಕೆ ನಿಲ್ಲಿಸಿದ ಸಂದರ್ಭಗಳೂ ಇವೆ. ಅವರಲ್ಲಿ ಹೆಚ್ಚಿನವರು ಚಂದಾ ಕೊಡುವ ಸಾಮರ್ಥ್ಯವಿಲ್ಲದವರೇ ಅಲ್ಲ. 'ಕಳಿಸುತ್ತೇವೆ'ಂದು ಪದೇ ಪದೇ ಹೇಳಿದ್ದವರೇ. ಅಂಥವರು ಪತ್ರಿಕೆ ನಿಲ್ಲಿಸಿದ್ದರೂ ಸಹ ಚಂದಾ ಬಾಕಿಯನ್ನು ಚುಕ್ತಾ ಮಾಡಿ ಪುನಃ ಪತ್ರಿಕೆ ತರಿಸಲು ಕೋರಿಕೆ.

ಕೊನೆಯದಾಗಿ:

ಎಲ್ಲಾ ತರದ ಸೌಲಭ್ಯಗಳ ಕೊರತೆ ಸಾಲದೆಂಬಂತೆ, ಮುದ್ರಣ ಸಹಾಯಕರು ಸಹ ಸಿಗದ ಈ ಊರಿನಲ್ಲಿ ಇಡೀ ವರ್ಷ ಕರಾರುವಾಕ್ಕಾಗಿ ಪತ್ರಿಕೆ ಪ್ರಕಟಿಸಲು ನಾವು ಎಲ್ಲ ಶ್ರಮವನ್ನೂ ತೆಗೆದುಕೊಂಡಾಗ್ಯೂ ವರ್ಷದಲ್ಲಿ ಎರಡೋ ಮೂರೋ ಪತ್ರಿಕೆಗಳು ಪ್ರಕಟವಾಗದೆ ಹೋಗುತ್ತವೆ. ಉಳಿದಂತೆ (ಒಂದು ದಿನ ಹೆಚ್ಚು-ಕಮ್ಮಿಯಾದರೂ) ಪ್ರತಿ ವಾರ ಪ್ರಕಟವಾಗುತ್ತದೆ. ಹಾಗೂ ಪ್ರತಿಯೊಬ್ಬ ಚಂದಾದಾರರಿಗೂ ತಪ್ಪದಂತೆ ಕಳಿಸುತ್ತೇವೆ.

ಹೀಗಿದ್ದೂ ಅಲ್ಲೊಬ್ಬರು-ಇಲ್ಲೊಬ್ಬರು, "ನಿಮ್ಮ ಪತ್ರಿಕೆ ಸರಿಯಾಗಿ ಬರುವುದೇ ಇಲ್ಲ" ಎನ್ನುವುದಿದೆ. ನಾವು ಪತ್ರಿಕೆಯಲ್ಲಿದ್ದ ವಿಷಯಗಳನ್ನು ಜ್ಞಾಪಿಸಿದಾಗ ಅವು ತಲುಪಿರುವುದನ್ನು ಒಪ್ಪಿಕೊಂಡರೂ, "ಆದರೂ ಸರಿಯಾಗಿ ಬರುವುದಿಲ್ಲ" ಎಂಬ ಕೊನೇ ಮಾತನ್ನು ಉಳಿಸಿಕೊಳ್ಳುತ್ತಾರೆ. ನಿಜವಾಗಿಯೂ ಬರುತ್ತಿಲ್ಲವಾದರೆ ಖಂಡಿತ ತಿಳಿಸಿ. ಏನಾಗಿದೆಯೆಂದು ಪರಿಶೀಲಿಸುತ್ತೇವೆ.

ಇಷ್ಟಲ್ಲದೆ, ಮುದ್ರಣ ಸಹಾಯಕರ ಕೊರತೆಯಿಂದ ಕೆಲಸದ ಒತ್ತಡ ಹೆಚ್ಚಿ ಪತ್ರಿಕೆಗೆ ಅಡಚಣೆಯಾಗಬಾರದೆಂದು ಈಗ ಮುದ್ರಣ ಕೆಲಸ ತೆಗೆದುಕೊಳ್ಳುವುದನ್ನು ತೀವ್ರವಾಗಿ ಕಮ್ಮಿ ಮಾಡಿದ್ದೇವೆ. ಇದರಿಂದ ಪತ್ರಿಕೆಯ ಪ್ರಕಟಣೆಯಲ್ಲಿ ಈವರೆಗೆ ಇದ್ದ ನ್ಯೂನತೆಯನ್ನೂ ಸಹ ಸರಿಪಡಿಸುತ್ತೇವೆಂಬ ಭರವಸೆಯಿದೆ.

ಮನಿ ಆರ್ಡರ್ ಕಳಿಸುವವರಿಗೆ ವಿಳಾಸ: ಸಂಪಾದಕರು, "ಮುಂಜಾವು" ವಾರ ಪತ್ರಿಕೆ, ಕೊಪ್ಪ, ಚಿಕ್ಕಮಗಳೂರು ಜಿಲ್ಲೆ.

ಕೊಪ್ಪ ಸಿಂಡಿಕೇಟ್ ಬ್ಯಾಂಕಿನ ಉಳಿತಾಯ ಖಾತೆ ಸಂಖ್ಯೆ 10756ಕ್ಕೆ ಯಾವುದೇ ಸಿಂಡಿಕೇಟ್ ಬ್ಯಾಂಕ್ ಶಾಖೆಯಿಂದ ಎಂ.ಟಿ.ಯನ್ನೂ ಮಾಡಬಹುದು. ಕಾಲ್ಮುತ್ತಸ್ತ್ರರು ಗ್ರಾಮೀಣ ಬ್ಯಾಂಕಿನಲ್ಲೂ ನಮ್ಮ ಉಳಿತಾಯ ಖಾತೆ ಇದೆ. ಅಲ್ಲೂ ಜಮಾ ಮಾಡಬಹುದು. ಬ್ಯಾಂಕಿಗೆ ಜಮಾ ಮಾಡಿದವರು ಪತ್ರ ಬರೆದು ತಿಳಿಸಿ.

"ಚಂದಾ ಹಣ ಕಳಿಸಿ - ಪತ್ರಿಕೆ ತರಿಸಿ - ಪತ್ರಿಕೆ ಬೆಳೆಸಿ."

ವಂದನೆಗಳು.

ಸಿರಿಮನೆ ನಾಗರಾಜ್

ಸ್ವಾಮಿ ವಿವೇಕಾನಂದರ ನುಡಿ ಮುತ್ತುಗಳು

ಕರ್ತವ್ಯ : ನೀನು ಯಾವುದಾದರೂ ಕೆಲಸವನ್ನು ಮಾಡುತ್ತಿರುವಾಗ ಅದನ್ನು ಕುರಿತಲ್ಲದೆ ಬೇರೆ ಯಾವುದನ್ನೂ ಯೋಚಿಸಬೇಡ. ಅದನ್ನು ಒಂದು ಪೂಜೆಯಂತೆ ಮಾಡು.

* * *

ವಿದ್ಯೆ : ನಿಜವಾದ ವಿದ್ಯೆ ಒಬ್ಬನನ್ನು ಸ್ವಾವಲಂಬಿಯನ್ನಾಗಿ ಮಾಡಬೇಕು. ಜನಸಾಮಾನ್ಯರಿಗೆ ಜೀವನದ ಹೋರಾಟಕ್ಕೆ ಸಹಾಯ ಮಾಡದ, ಚಾರಿತ್ರ್ಯ ಶುದ್ಧಿಗೆ ಸಹಾಯ ಮಾಡದ, ಧೈರ್ಯವನ್ನು ನೀಡದ, ಶಾಲಾ ಕಾಲೇಜುಗಳ ವಿದ್ಯಾಭ್ಯಾಸದಿಂದ ಏನು ಪ್ರಯೋಜನ?

* * *

ಚಿಂತೆ : ಚಿಂತೆ ಚಿಂತನವಾಗಬೇಕು

(ಸಂಗ್ರಹ: **ಗಣೇಶ ಪಟವರ್ಧನ್**)

ಕುಷ್ಠ

ಅರಿವಿಲ್ಲದೆಯೇ ಒಳ ಹೊಗುತ್ತವೆ. ಸೂಕ್ಷ್ಮಾ
ತಿಸೂಕ್ಷ್ಮ ವೈದ್ಯ ಪರೀಕ್ಷೆಗೂ ದಕ್ಕದೆ ಗುಪ್ತ
ವಾಗಿ ಕೂತು ಈ ದುಷ್ಟ ಕ್ರಿಮಿಗಳು ಹೊಂಚು ಹಾಕಿ
ಮುಹೂರ್ತ ಕಾದು ಜಿಮಿ ಜಿಮಿ ಹೊರ ದಂಡಯಾತ್ರೆ
ಹೊರಡುತ್ತವೆ – ಬಿಳಿ ಕಪ್ಪು ಮಚ್ಚೆ ವರ್ತುಲ —
ಗೆದ್ದು ಉರವಣಿಸಿ ಧ್ವಂಸ ಕಾಂಡ ತೊಡಗುತ್ತವೆ.

x x x

ಇರಿದು ಚೂರಿ, ಉರಿಸಿ ಬೆಂಕಿ, ಮಾಂಸ ಖಂಡಗಳ
ಇಂಚಿಂಚು ತುಂಡರಿಸಿ ಹಂಚಿಕೊಂಡು ಮುಗಿ ಬೀಳುವ
ಶಾರ್ದೂಲ ತೋಳಗಳ ನೆರಹಿ – ಕಾವಿಶಾಟಿಯ ಮರೆ,
ಗಾಂಧಿ ಟೋಪಿಯ ಪಹರೆ, ಮೊಗವಾಡ ತೊಟ್ಟು
ಬಿಟ್ಟು ಮಾನವ್ಯದ ಎಲ್ಲೆ ಕಟ್ಟು, ಕ್ರಿಮಿ ದೈತ್ಯರ
ಪಾಳೆಯ ಹರಡುತ್ತಿದೆ ಈ ನಾಡಿನುದ್ದಗಲ.
ಮೈಯೊಡ್ಡಿ, ಕೈ ಕಟ್ಟಿ, ರೆಪ್ಪೆ ಬಿಗಿದು, ತುಟಿ ಹೊಲಿದು
ನಾಲಗೆ ಒಳಗೆಳೆದು, ಕಾಲಲ್ಲಿ ಬ್ರಹ್ಮಾಂಡ ಹೊರೆ
ಬಿದ್ದಂತೆ, ಕದಲದೆ ಕಮರುವ ನಿರ್ಲಿಪ್ತರು ನಾವು —
ಮೆದುಳು ಕಳೆದು ಹೊಟ್ಟು ತುಂಬಿ,
ಹೃದಯಕ್ಕೆ ಬದಲಿ ಡಬ್ ಡಬ್ ಯಂತ್ರ ತುರುಕಿಸಿ ಕೊಂಡ
ಕೀಲು ಗೊಂಬೆಗಳು, ಕೂಲಿ ಬಂಟರು ನಾವು —
ಹೊಟ್ಟೆ ಸಿಗಿದು ರಕ್ತ ಕುಡಿದು, ಗಹಗಹಿಸಿ
ನಗುವ ಕಟುಕ ಕಂಟಕರ ಕಾಲಿಗೇ ನಮೋ ನಮೋ
"ಅಯ್ಯಾ ನೀವೇ ಶರಣು"

x x x

ಕುಷ್ಠ ಕ್ರಿಮಿಗಳ ಅನವರತ ದಾಳಿ —
ಮೂಗು ಮೊಂಡು, ನಾಲಗೆ ತುಂಡು, ಕಣ್ಣು ಕುರುಡು,
ಕಿವಿ ಕಿವುಡು, ತೊಗಲಲ್ಲಿ ಹುಣ್ಣು, ಸೊಟ್ಟ ಕಾಲು,
ಉದುರಿದ ಬೆರಳು, ತೆವಳಿ ಸಾಗುವ ಹುಳು —
ವೇದನೆಯ ಸಂವೇದನೆಯೇ ಸತ್ತು ಬಿಡುವ
ಉಸಿರು ನಿಲ್ಲುವ ಮೊದಲೇ ಗೋರಿಯಾಗುವ ದುರಂತ.

ಗುರುರಾಜ ತಂತ್ರಿ, ಪಣಿಯೂರು

(ಜನವರಿ 1980)

ಭಾರತವು ಸಂಪೂರ್ಣ ಸಾರ್ವಭೌಮ ಪ್ರಜಾಸತ್ತಾತ್ಮಕ ಜಾತ್ಯತೀತ ಸಮಾಜವಾದಿ ಗಣರಾಜ್ಯವಾದ ದಿನ ಜನವರಿ 26, 1950

ಗ್ರಾಮಸಭೆ ಮತ್ತು ಜಿಲ್ಲಾ ಪರಿಷತ್ತುಗಳನ್ನು ರಚಿಸಿರುವ ಕರ್ನಾಟಕ ರಾಜ್ಯ ಸರಕಾರ ಜನತೆಗೆ ಅಧಿಕಾರ ನೀಡುವ ಹೊಸ ಹೆಜ್ಜೆಯ ಮೂಲಕ ಸಂವಿಧಾನದ ಕನಸುಗಳಲ್ಲೊಂದನ್ನು ನನಸಾಗಿಸಿದೆ.

1983ರಲ್ಲಿ ಕರ್ನಾಟಕದಲ್ಲಿ ಅಧಿಕಾರಕ್ಕೆ ಬಂದ ಹೊಸ ಸರಕಾರ ಜನತೆಯ ಆಶೋತ್ತರಗಳನ್ನು ಈಡೇರಿಸಲು ಕಂಕಣಬದ್ಧವಾಯಿತು. ಜನ ಸಮುದಾಯದ ಜೀವನ ಮಟ್ಟ ಸುಧಾರಿಸಿ ಸಮೃದ್ಧಿ ಮತ್ತು ಸಂತಸವನ್ನು ತಂದುಕೊಡುವ ದಿಸೆಯಲ್ಲಿ ಹೊಸ ಹೊಸ ಮಾರ್ಗಗಳನ್ನು ಕಂಡುಕೊಂಡಿತು.

ಜನತೆಗೆ ಅಧಿಕಾರ :

ಪ್ರಜಾಪ್ರಭುತ್ವದಲ್ಲಿ "ಪ್ರಜೆಯೇ ಪ್ರಭು" ಎಂಬ ತತ್ವದಲ್ಲಿ ಅಚಲವಾದ ನಂಬಿಕೆ ಇಟ್ಟಿರುವ ಕರ್ನಾಟಕಸರ್ಕಾರ, ಪ್ರಜಾಪ್ರಭುತ್ವ ಅರ್ಥಪೂರ್ಣವಾಗಬೇಕಾದರೆ ಆಡಳಿತದಲ್ಲಿ ಜನತೆಯ ಸಕ್ರಿಯ ಪಾತ್ರ ಅತ್ಯಂತ ಅಗತ್ಯ ಎಂಬುದನ್ನು ಮನಗಂಡಿದೆ.

ಇದಕ್ಕೆ ಮುಖ್ಯವಾಗಿ ಬೇಕಾದದ್ದು ಅಧಿಕಾರ ವಿಕೇಂದ್ರೀಕರಣ. ಆದ್ದರಿಂದಲೇ ಪಂಚಾಯತಿ ರಾಜ್ಯ ಸಂಸ್ಥೆಗಳನ್ನು ರಚಿಸಿ, ಗ್ರಾಮೀಣ ಪ್ರದೇಶಗಳ ಸಮಗ್ರ ಅಭಿವೃದ್ಧಿ ಕಾರ್ಯಗಳಲ್ಲಿ ಜನತೆ ನೇರವಾಗಿ ಪಾಲುಗೊಳ್ಳುವ ವ್ಯಾಪಕ ಅವಕಾಶಗಳನ್ನು ಕಲ್ಪಿಸಿದೆ.

ಈ ಗುರಿ ಸಾಧನೆಗಾಗಿ ಎರಡು ಪ್ರಮುಖ ಚುನಾವಣಾ ಸುಧಾರಣೆಗಳನ್ನು ಕಾರ್ಯಗತಗೊಳಿಸಲಾಗಿದೆ. ಮೊದಲನೆಯದು: ಯುವ ಸಮೂಹ ಸಾರ್ವಜನಿಕ ವಿಚಾರಗಳಲ್ಲಿ ತಮ್ಮ ಅಭಿಮತ ವ್ಯಕ್ತಪಡಿಸಲು ಅನುಕೂಲವಾಗುವಂತೆ ಮತದಾನದ ವಯೋಮಿತಿಯನ್ನು 18 ವರ್ಷಗಳಿಗೆ ಇಳಿಸಿರುವುದು. ಎರಡನೆಯದು: ಈ ಸ್ಥಳೀಯ ಸಂಸ್ಥೆಗಳಲ್ಲಿ ಶೇಕಡ 20ರಷ್ಟು ಸ್ಥಾನಗಳನ್ನು ಮಹಿಳೆಯರಿಗೆ ಮೀಸಲಾಗಿಟ್ಟಿರುವುದು. ಇದರಿಂದ ಮಹಿಳೆಯರು ರಾಷ್ಟ್ರಾಭಿವೃದ್ಧಿ ಕಾರ್ಯಗಳಲ್ಲಿ ಹೆಚ್ಚಿನ ಪಾತ್ರ ವಹಿಸಲು ನೆರವಾಗಿದೆ.

ಈಗ ಪಂಚಾಯತಿ ರಾಜ್ಯ ವ್ಯವಸ್ಥೆಯ ಮೊದಲ ವರ್ಷವೇ ಜಿಲ್ಲಾ ಪರಿಷತ್ತುಗಳು ಮತ್ತು ಮಂಡಲ ಪಂಚಾಯತಿಗಳಿಗೆ 900 ಕೋಟಿ ರೂಪಾಯಿಗಳನ್ನು ಸರಕಾರ ನೀಡುತ್ತದೆ.

ಪಂಚಾಯತಿ ರಾಜ್ಯ ವ್ಯವಸ್ಥೆಯ ಅನುಷ್ಠಾನದಿಂದ ರಾಜ್ಯದಲ್ಲಿ 2469 ಮಂಡಲ ಪಂಚಾಯತಿಗಳು ಮತ್ತು ಜಿಲ್ಲಾ ಪರಿಷತ್ತುಗಳು ಅಸ್ತಿತ್ವಕ್ಕೆ ಬಂದಿವೆ.

ಈ ಸಂಸ್ಥೆಗಳು ತಮ್ಮ ವ್ಯಾಪ್ತಿಯಲ್ಲಿ ಬರುವ ಪ್ರದೇಶದ ಪ್ರಗತಿ ಕಾರ್ಯಗಳನ್ನು ರೂಪಿಸಿ ಅನುಷ್ಠಾನಗೊಳಿಸುವ ಹಿರಿಯ ಹೊಣೆ ಹೊತ್ತಿವೆ. ಈ ಮಂಡಲ ಪಂಚಾಯತಿಗಳು ಮತ್ತು ಜಿಲ್ಲಾ ಪರಿಷತ್ತುಗಳೇ ನಿಜವಾದ ಅರ್ಥದಲ್ಲಿ ಅಭಿವೃದ್ಧಿ ಕಾರ್ಯ ನಿರ್ವಹಿಸುವ ಮೂಲ ಘಟಕಗಳು.

ಪ್ರಥಮ ಬಾರಿಗೆ ನಮನಾದ ಪ್ರಾಥಮಿಕ ಹಂತದಿಂದ ಸುಮಾರು 56,000 ಪ್ರಜಾಪ್ರತಿನಿಧಿಗಳು ಆಯ್ಕೆಯಾಗಿದ್ದಾರೆ. ಇದರಲ್ಲಿ 29.051 ಜನ ಸಾಮಾನ್ಯ ವರ್ಗದ ಪ್ರತಿನಿಧಿಗಳು, 11887 ಜನ ಪರಿಶಿಷ್ಟ ಜನಾಂಗದ ಪ್ರತಿನಿಧಿಗಳು ಹಾಗೂ 14356 ಮಹಿಳಾ ಪ್ರತಿನಿಧಿಗಳಿದ್ದಾರೆ. ಮಹಿಳೆಯರಲ್ಲಿ 2469 ಜನ ಪರಿಶಿಷ್ಟ ಜನಾಂಗದ ಪ್ರತಿನಿಧಿಗಳು. ಇವರ ಜೊತೆಗೆ ಜಿಲ್ಲಾ ಪರಿಷತ್ತುಗಳಿಗೆ 887 ಸದಸ್ಯರು ಆಯ್ಕೆಯಾಗಿದ್ದಾರೆ

1987ರ ಜನವರಿ 2 ಮತ್ತು 20ರಂದು ನಡೆದ ಚರಿತ್ರಾರ್ಹ ಚುನಾವಣೆಗಳಲ್ಲಿ 1,82,18,177 ಜನ ಮತದಾರರು ಮತ ಚಲಾಯಿಸಿ ತಮ್ಮ ಪಕ್ಷ ಅಭಿಮತ ವ್ಯಕ್ತಪಡಿಸಿದ್ದಾರೆ.

ಪ್ರಜಾಪ್ರಭುತ್ವದ ಮೂಲ ಈ ಹೆಮ್ಮೆ ನಾಡಿನ ಮಣ್ಣಿನ ಮಕ್ಕಳಲ್ಲಿ ಅಡಗಿದೆ ಎಂಬುದನ್ನು ಕೃತಪಡಿಸುವ ಕರ್ನಾಟಕದ ಜನ ಸಮುದಾಯ ನಿಜಕ್ಕೂ ಅಭಿನಂದನಾರ್ಹರು.

ಕರ್ನಾಟಕ ವಾರ್ತೆ

ರಾಜ್ಯದ ಪ್ರಗತಿ ಮತ್ತು ಸಮೃದ್ಧಿಯ ಸಾಕಾರ — ಕರ್ನಾಟಕ ಸರ್ಕಾರ

ನಂ. ವಾಪ್ರಇ / ವಾಪ್ರವಿ / ಸಿಆರ್ / ಸಿ1 / ಸಿ3 / 86-87 / 495 ದಿನಾಂಕ 23-1-1987

ಹೀಗೊಂದು ಸಹಕಾರ ಸಂಘ

(2ನೇ ಪುಟದಿಂದ)

ಹೀಗೆ ಅವ್ಯವಸ್ಥೆ ಆಗಿರುವುದು ಇದೊಂದೇ ಶಾಖೆಯಲ್ಲಲ್ಲ. ಬಹುಶಃ ಈ ಸಹಕಾರ ಸಂಘದ ಎಲ್ಲ ಶಾಖೆಗಳ ಗತಿಯೂ ಇದೇ ಆಗಿದೆಯೆಂದು ತಿಳಿದು ಬರುತ್ತದೆ. ಈ ಹಿಂದೆ ಉತ್ತಮ ರೀತಿಯಲ್ಲಿ ನಡೆಯುತ್ತಿದ್ದು ಸರ್ಕಾರದಿಂದ ಹಣವೂ ಸಾಕಷ್ಟು ಪಡೆದಿದ್ದ ಈ ಸೊಸೈಟಿ ಮತ್ತು ಅದರ ಶಾಖೆಗಳು ಇಂದು ಸರಿಯಾಗಿ ನಡೆಯದೇ ತತ್ತರಿಸಿವೆ. ಸಿಬ್ಬಂದಿಯವರಿಗೆ ಸಂಬಳ ಕೊಡುವುದೂ ಕಷ್ಟವಾಗಿ ಈ ಸಹಕಾರ ಸಂಘವೇ ಮುಚ್ಚಿದರೆ ಆಶ್ಚರ್ಯವಿಲ್ಲ. ಸಂಘ ಮುಚ್ಚಿದರೆ ಸರ್ಕಾರ ಮುರಗೋಡರಿಗೆ ಬೇರೆ ಕಡೆ ಕೆಲಸ ನೀಡಿ ಸಂಬಳ ಕೊಡುತ್ತದೆ; ಆದರೆ ಬಡ ಜನತೆಗೆ ನ್ಯಾಯ ಬೆಲೆ ವಸ್ತುಗಳು ಸಿಗುವುದಕ್ಕೆ ಬೇರೆ ವ್ಯವಸ್ಥೆ **ಅಷ್ಟು ಸುಲಭದಲ್ಲಿ ಆಗುತ್ತದೆಯೆ ?**

ಮುರಗೋಡ್ ಹೀಗೆ ಬೇಜವಾಬ್ದಾರಿ, ಅಸಡ್ಡೆ ಮಾಡುತ್ತಿರುವುದು ಈ ಸಹಕಾರ ಸಂಘದ ಸಂಪೂರ್ಣ ಮೇಲ್ವಿಚಾರಕರಾದ ಕೊಪ್ಪ ಕ್ಷೇತ್ರಾಭಿವೃದ್ಧಿ ಅಧಿಕಾರಿಗಳ ಗಮನಕ್ಕೂ ಬಂದಿದೆ. ಆದರೆ ಈತನನ್ನು ತಿದ್ದಿ ಸರಿಮಾಡಿ ಕೆಲಸ ಮಾಡಿಸಲು ಬಹುಶಃ ಅವರಿಗೂ ಅಸಾಧ್ಯವಾಗಿರುವಂತೆ ತೋರುತ್ತದೆ. ಆದ್ದರಿಂದ ಸಂಬಂಧ ಪಟ್ಟ ಮೇಲಧಿಕಾರಿಗಳು ಕೂಡಲೇ ಇತ್ತ ಗಮನ ಹರಿಸಿ, ತಕ್ಷಣ ಸೂಕ್ತ ಕ್ರಮ ಕೈಗೊಳ್ಳದಿದ್ದಲ್ಲಿ ಅದರಿಂದಾಗುವ ನಷ್ಟಕ್ಕೆ ಏನೂ ತಪ್ಪಿಲ್ಲದ ಬಡ ಜನತೆ ತುತ್ತಾಗಬೇಕಾಗುತ್ತದೆ.

ವರದಿ:
ಹೊಸ್ಮನೆ ರಮೇಶ್
ಹಿರೇಕೊಡಿಗೆ.

ಅಡಿಕೆ ಧಾರಣೆ

ಶಿವಮೊಗ್ಗ ತಾ॥ 28.1.1987
ಸರಕು : 2859 – 3601
ಬೆಟ್ಟೆ : 1020 – 2179
ಗೊರಬಲು : 800 – 1089

ಸಾಗರ ತಾ॥ 24.1.1987
ಚಾಲಿ ರೂ. 1539 – 1789
ಸಿಪ್ಪೆ ಗೋಟು ರೂ. 649 – 819
ಆಪಿ ರೂ. 3089 – 3519

ವೈದ್ಯಾಧಿಕಾರಿಗಳ ಕೃತಜ್ಞತೆ

ಕೊಪ್ಪ: ಚಿಕ್ಕಮಗಳೂರಿನಲ್ಲಿ ಜ. 10 ಮತ್ತು 11ರಂದು ಯಶಸ್ವಿಯಾಗಿ ನಡೆದ ರಾಜ್ಯಮಟ್ಟದ ಸರ್ಕಾರಿ ವೈದ್ಯಾಧಿಕಾರಿಗಳ ವಾರ್ಷಿಕ ಸಮ್ಮೇಳನಕ್ಕಾಗಿ ಉದಾರವಾಗಿ ದೇಣಿಗೆ ನೀಡಿದ ಎಲ್ಲ ಹಿತೈಷಿಗಳಿಗೂ ಸಮ್ಮೇಳನದ ಆರ್ಥಿಕ ಸಮಿತಿ ಅಧ್ಯಕ್ಷರಾಗಿದ್ದ ಕೊಪ್ಪದ ವೈದ್ಯಾಧಿಕಾರಿ ಡಾ॥ ಎಂ. ಜಿ. ಪ್ರಸಾದ್ ಹೃತ್ಪೂರ್ವಕವಾದ ಕೃತಜ್ಞತೆಗಳನ್ನು ಸಲ್ಲಿಸಿದ್ದಾರೆ.

ನ. ರಾ. ಪುರ ಮಂಡಲ ಪಂಚಾಯತಿ ಚುನಾವಣೆ ಫಲಿತಾಂಶ

ಮುತ್ತಿನಕೊಪ್ಪ ಮಂಡಲ: ಜನತಾ –11 [ನಾಗರತ್ನ, ಶ್ರೀಕಂಠಯ್ಯ, ಕೆ. ಸಿ. ಭಾರತಿ, ಎಚ್.ಬಿ. ರಾಜೇಂದ್ರ, ಪುಟ್ಟಪ್ಪ ಕೆ. ವಿ. ವಿಜೇಂದ್ರ, ಸಿದ್ದಪ್ಪ, ಸುಬ್ಬಯ್ಯ, ಕೆ.ಎಸ್. ನಾರಾಯಣಸ್ವಾಮಿ, ಕೆ.ಜಿ. ಸಿದ್ದಯ್ಯ, ಎಚ್ ಜಿ. ಶಕುಂತಳಮ್ಮ]; ಕಾಂಗ್ರೆಸ್–3 [ವಸಂತಮ್ಮ, ಶೌಕತ್ ಆಲಿ, ವನಮಾಲ]

ಬಾಳೆ ಮಂಡಲ: ಜನತಾ–12 [ಎಂ. ಕೃಷ್ಣ, ಕೆ. ಮಲ್ಲನ್, ಟಿ. ಟಿ. ವೆಂಕಟರಾಮು, ಬಿ. ಎಸ್. ತಿಮ್ಮಯ್ಯ, ಬಾಲಕೃಷ್ಣಮೂರ್ತಿ, ಆರ್. ಗೋವಿಂದಪ್ಪ, ಚೆರಿಯ, ಗೀತಮ್ಮ, ನಿಂಗಪ್ಪ, ಇಂದ್ರಮ್ಮ, ಚಿನ್ನಯ್ಯ, ನಾಗರಾಜ.]; ಕಾಂಗ್ರೆ–1 [ಸೀತಮ್ಮ]; ಸಿಪಿಐ–1 [ಐರಿನ್ ಡಿ'ಸಿಲ್ವ]; ಪಕ್ಷೇತರ–3 [ಇ.ಎಚ್. ಕೃಷ್ಣಮೂರ್ತಿ, ಕೆ ಜಿ. ಜಾರ್ಜ್, ಎಚ್. ಎಸ್. ಕೃಷ್ಣಯ್ಯ]

ಮೆಣಸೂರು ಮಂಡಲ: ಜನತಾ–6 [ರೋಸಿ, ಬೆಳ್ಳೀ ಗೌಡ, ವಿನೋದಮ್ಮ, ರಾಮಯ್ಯ, ಮಂಜಪ್ಪ, ರಾಮನಾಯ್ಕ]; ಕಾಂಗ್ರೆಸ್–7 [ಮಾಧುಕುಟ್ಟಿ, ಸಂಜೀವ ಶೆಟ್ಟಿ, ಗುರುವ, ಜಲಜಾಕ್ಷಮ್ಮ, ನಾಗಪ್ಪ, ತೆರಿಯನ್, ರತ್ನಮ್ಮ]; ಪಕ್ಷೇತರ–1 [ಎಸ್. ಆರ್. ಕೃಷ್ಣಯ್ಯ]

ಅಡುವಳ್ಳಿ ಮಂಡಲ ಜನತಾ–6 [ವಿ. ಟಿ. ಹೂವಣ್ಣ, ದುಗ್ಗಯ್ಯ, ಜಯಲಕ್ಷ್ಮಿ, ಎಂ. ವಿ. ಶ್ರೀನಿವಾಸ್, ರಾಮಸ್ವಾಮಿ, ಶೇಖರ್,]; ಕಾಂಗ್ರೆಸ್–7 [ಲಲಿತ, ಪುತ್ತಾಬೇರಿ, ಕೆ.ಜಯಶೆಟ್ಟಿ, ಮಂಜಯ್ಯ, ಕೃಷ್ಣ ಪೂಜಾರಿ, ಕೆ. ಟಿ. ಗಿಡ್ಡೇಗೌಡ, ಲಕ್ಷ್ಮಮ್ಮ]; ಪಕ್ಷೇತರ – 2 [ಲಕ್ಷ್ಮಿ, ಲಕ್ಷ್ಮೀನಾರಾಯಣ,]

ಬಿ. ಕಣಬೂರು ಮಂಡಲ: ಜನತಾ –9 [ಕೆ. ನೂರ್‌ಮಹಮದ್, ಸಯ್ಯದ್ ನಜಮುದ್ದೀನ್, ಕೆ. ಸಿ. ವೆಂಕಟೇಶ್, ಎಚ್. ಕೆ. ಕೃಷ್ಣಸ್ವಾಮಿ, ಫೆಲ್ಸಿಪಾಯ್ಸ್, ಮಂಜಯ್ಯ, ಮ್ಯಳ್ಳೂರಮ್ಮ, ಕೆ. ಎಸ್. ರುದ್ರಪ್ಪಗೌಡ, ರಾಮಯ್ಯ (ಅವಿ)]; ಕಾಂಗ್ರೆಸ್–4 [ಅಬ್ದುಲ್ ವಹೀದ್. ಶಾಂತಮ್ಮ, ಮಂಜಯ್ಯ, ಬಾಲಕೃಷ್ಣ.]

ಬಸ್ನೂರು ಮಂಡಲ: ಜನತಾ–8 [ಎಚ್. ಡಿ. ಮಲ್ಲಪ್ಪ ಗೌಡ, ರಂಗಯ್ಯ, ರತ್ನಮ್ಮ, ಫೆಡ್ರಿಕ್ ಡಿ' ಕುನ್ಹಾ, ಕೃಷ್ಣಯ್ಯ, ಟಿ.ಆರ್. ಚಂದ್ರೇಗೌಡ, ಎಸ್.ಎಂ ಮುರುಗೇಶ್, ಲೀಲಾ]; ಕಾಂಗ್ರೆಸ್–2 [ಐರೀನ್ ಪಿಂಟೋ, ಚಿಕ್ಕಯ್ಯ]; ಪಕ್ಷೇತರ–1 [ಕೆ. ಸಿ. ತಿಮ್ಮಪ್ಪ ಗೌಡ]

ಸೀತೂರು ಮಂಡಲ: ಜನತಾ–8 [ಎಸ್. ಡಿ. ವಿ. ಗೋಪಾಲರಾವ್, ಯೋಗೇಂದ್ರ, ಕೆ.ಪಿ. ಮಂಜಪ್ಪ ಗೌಡ, ಶರತ್ ಕುಮಾರ್ ಕಲ್ಲೆ, ಎಂ. ಎಸ್. ಸತ್ಯನಾರಾಯಣ, ಲಲಿತ, ಕೊಲ್ಲ, ಸುಶೀಲಮ್ಮ]; ಕಾಂಗ್ರೆಸ್–1 ಎಂ.ಜಿ ವೆಂಕಪ್ಪ (ಅವಿ)] ಪಕ್ಷೇತರ–3 [ನಾರಾಯಣಸ್ವಾಮಿ, ವಿಮಲ, ರಾಮಯ್ಯ]

ದುಡಿವ ವರ್ಗದ ಓಟು - ಒಲವು

(1ನೇ ಪುಟದಿಂದ)

ದಲಿತರು ತಮ್ಮೊಳಗೇ ಕಚ್ಚಾಡಿಕೊಂಡು ಶಂಭುವಿಗೆ ಪೆಟ್ಟಾಗಿದ್ದೆಂದೂ ಪ್ರತಿವಾದ ಹೆಣೆಯಲಾಗಿದೆ. ಆದರೆ ಇದೆಲ್ಲದರ ಸತ್ಯಾಸತ್ಯತೆಯನ್ನು ಕೂಲಂಕಷವಾಗಿ ಅಧ್ಯಯನ ಮಾಡಿದವರಿಗೆ ಇದು ಉದ್ದೇಶ ಪೂರ್ವಕವಾದ, ನಿಯೋಜಿತ ದೌರ್ಜನ್ಯ ಎಂಬುದರಲ್ಲಿ ಏನೂ ಸಂಶಯವುಳಿಯುವುದಿಲ್ಲ.

ಇಷ್ಟೇ ಅಲ್ಲ, ಅದೇ ರಾತ್ರಿ ಶಂಭುವಿನ ತಂದೆಯಾದ ವೃದ್ಧ ಮೇಸ್ತ್ರಿಯ ಮನೆಗೆ ಜನತಾದ ಬಿ.ಜಿ.ಯಾದವ ಹೋಗಿ ಬಾಯಿಗೆ ಬಂದಂತೆ ನಿಂದಿಸಿ, ಬಾಗಿಲನ್ನು ಒದ್ದು ಗಲಾಟೆ ಮಾಡಿದ್ದಾಗಿ ದೂರುವ ದಲಿತರು, ಮರುದಿನ ಅವರನ್ನು ಪೇಟೆ ಬೀದಿಯಲ್ಲಿ ಅರ್ಧ ಗಂಟೆಗೂ ಹೆಚ್ಚು ಕಾಲ ಘೇರಾವ್ ಮಾಡಿ "ಈಗ ಒದೆಯಲು" ಆಹ್ವಾನಿಸಿದರೆನ್ನಲಾಗಿದೆ. "ಆ ಮೇಸ್ತ್ರಿ ಯಾದವನಿಗೆ ದುಡ್ಡು ಕೊಡಲಿಕ್ಕಿತ್ತಂತೆ. ಅದನ್ನು ಕೇಳಲು ಹೋದುದಕ್ಕೆ ಅವನೇ ಬಾಯಿಗೆ ಬಂದಂತೆ ಬಯ್ದುದಲ್ಲದೆ ಮರುದಿನ ನೋಡಿದರೆ ಅದಕ್ಕೇ ಒಂದು ದೂರನ್ನೂ ಕೊಟ್ಟಿದ್ದಾನಂತೆ" ಎಂಬ ವಿವರಣೆ ಸಿಗುತ್ತದೆ. ಮೇಸ್ತ್ರಿ ಹೇಳುತ್ತಾರೆ – "ಅವರು ದುಡ್ಡು ವಸೂಲಿಗೇ ಬಂದಿದ್ದರೆಂದಿಟ್ಟುಕೊಳ್ಳೋಣ. ಅದು ಯಾವಾಗ? ಸರಿ ರಾತ್ರಿ ಕಳೆದ ಮೇಲಾ? ಬಾಗಿಲು ಒದ್ದು ಬಯ್ದರೆ–ಬಡಿದರೆ ದುಡ್ಡು ಉದುರುತ್ತಾ? ಚುನಾವಣೆಯ ಹಿಂದಿನ ರಾತ್ರಿ ಹೆಂಡ ತಂದುಕೊಂಡು ನಮ್ಮನ್ನೆಲ್ಲ ಕರೆದಾಗ ನಾವು ಅದನ್ನು ಕುಡಿಯುವುದಕ್ಕಾಗಲಿ, ಅವರಿಗೆ ಓಟು ಕೊಡುವುದಕ್ಕಾಗಲಿ ಒಪ್ಪದಿದ್ದುದಕ್ಕಲ್ಲವಾ ಇದೆಲ್ಲ...."

ಬಂಡವಾಳ ?

ಇತ್ತ ಕಾಂಗ್ರೆಸಿಗರು ಸಹ ದಲಿತರ ಮೇಲಿನ ಈ ದೌರ್ಜನ್ಯ, ಅದಕ್ಕೆ ಅವರ ಪ್ರತಿರೋಧ–ಇವನ್ನು ಬಂಡವಾಳ ಮಾಡಿಕೊಳ್ಳುತ್ತಿರುವ ಲಕ್ಷಣಗಳು ಕಾಣುತ್ತಿವೆ. ಜನತಾದವರಂತೂ ತಮ್ಮ ತಪ್ಪನ್ನು ಒಪ್ಪಿಕೊಳ್ಳುವುದಿರಲಿ, ಅರ್ಥ ಮಾಡಿಕೊಳ್ಳುವುದಕ್ಕೂ ತಯಾರಿಲ್ಲ. ಪ್ರೀತಿ, ಸಹಾನುಭೂತಿ, ಸಹಕಾರಗಳಿಂದ ಗಳಿಸಲಾರದ ಒಲವನ್ನು, ರಾಜ್ಯಮಟ್ಟದ ಭ್ರಷ್ಟತೆ, ನಿಷ್ಪ್ರಯೋಜಕತೆಗಳಿಂದ ಕಳೆದುಕೊಂಡ ಒಲವನ್ನು, ಹೀಗೆ ದಬ್ಬಾಳಿಕೆಯಿಂದ ಪಡೆದುಕೊಳ್ಳುವುದಕ್ಕೆ ಇವರಿಗೆ ಬಹುಶಃ ತುರ್ತು ಪರಿಸ್ಥಿತಿಯ ಪ್ರೇರಣೆಯೇನೋ!

ಒಟ್ಟಿನಲ್ಲಿ ಜನತಾ–ಕಾಂಗ್ರೆ ಹೆಸರಿನಲ್ಲಿ ಪಟ್ಟ ಭದ್ರ ಹಿತಾಸಕ್ತಿ ಹಳ್ಳಿ ಹಳ್ಳಿಗಳಲ್ಲಿ ಹಣಾ ಹಣಿ ಜಗ್ಗಾಟದಲ್ಲಿ ನಿರತವಾಗಿದೆ. ಇನ್ನಾದರೂ ಇದಕ್ಕೊಂದು ತಡೆ ಹಾಕಿ, ಜನರಲ್ಲಿ ಹೊಸದೇನೋ ಆಶಾವಾದ (ಭ್ರಮೆ?) ಹುಟ್ಟಿಸಿರುವ ಜಿಲ್ಲಾ ಪರಿಷತ್ ಮತ್ತು ಮಂಡಲ ಪಂಚಾಯತ್ ವ್ಯವಸ್ಥೆಗಳಿಂದ ಅಷ್ಟಿಷ್ಟಾದರೂ ಪ್ರಯೋಜನ ಸಾಮಾನ್ಯ ಜನತೆಗೆ ಸಿಗುವಂತೆ ಮಾಡಬಲ್ಲ ಮುತ್ಸದ್ದಿತನವಾಗಲೀ, ನಾಯಕತ್ವದ ಸಾಮರ್ಥ್ಯವಾಗಲಿ, ಹಳಬರಲ್ಲೂ ಹೊಸಬರಲ್ಲೂ ಯಾರಲ್ಲೂ ಸದ್ಯಕ್ಕೆ ಕಾಣಬರುತ್ತಿಲ್ಲ ಎಂದರೆ ಅತಿಶಯೋಕ್ತಿಯಲ್ಲ

ಜನ ಇದಕ್ಕೆಲ್ಲ, ಇವರಿಗೆಲ್ಲ ಇನ್ಯಾವ ಮದ್ದು ಅರೆಯುತ್ತಾರೋ – ಎಂಬುದಷ್ಟೇ ನಿರೀಕ್ಷೆ

ಸಂಪಾದಕ, ಮುದ್ರಕ ಮತ್ತು ಪ್ರಕಾಶಕ: ಸಿರಿಮನೆ ನಾಗರಾಜ್, ಅಚ್ಚು: ದೀವಟಿಗೆ ಅಚ್ಚುಕೂಟ, ಕೊಪ್ಪ.